# ಪರಿವರ್ತನೆಯ ಪ್ರಬುದ್ಧತೆ

(ಗ್ರಾಮೀಣಾಭಿವೃದ್ಧಿಯಲ್ಲಿ ಅಣ್ಣಾ ಹಜಾರೆಯವರ ರಾಳೇಗಾಂವ್ ಸಿದ್ಧಿ)

ರಾಳೇಗಾಂವ್ ಸಿದ್ಧಿ ಕೃಷಿ ಪ್ರವಾಸಿಗರಿಗೊಂದು ಪುಣ್ಯಧಾಮ. ಪ್ರತಿಯೊಬ್ಬ ಕೃಷಿ ಆಸಕ್ತನೂ ನೋಡಲೇಬೇಕಾದ ಸ್ಥಳವಿದು. ಇಲ್ಲಿ ಆಗಿರುವ, ಆಗುತ್ತಿರುವ ಕೆಲಸಗಳ ಹಿಂದಿನ ಶಕ್ತಿ ಅಣ್ಣಾ ಹಜಾರೆ. ರಾಳೇಗಾಂವ್ ಸಿದ್ಧಿಯ ಜನರು ನೆಲ, ಜಲ, ಶಿಕ್ಷಣ, ನಾಗರಿಕತೆ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಹೀಗೆ ಏನೆಲ್ಲಾ ವಿಷಯಗಳಲ್ಲಿ ಸಾಕ್ಷರರು! ಇವರ ಸಾಕ್ಷರತೆಯು ನಿರಂತರವಾಗಿರುವಂತೆ ಬಿಗಿಯಾದ ಶಿಸ್ತು ಇಲ್ಲಿದೆ. ಒಗ್ಗಟ್ಟು, ಪರಸ್ಪರ ಗೌರವ, ಅಭಿವೃದ್ಧಿಯಲ್ಲಿ ಆಸಕ್ತಿ, ಇಲ್ಲಿನ ಪ್ರತಿಯೊಬ್ಬನೂ "ನಾನು ರಾಳೇಗಾಂವ್ ಸಿದ್ಧಿಯವನು" ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ರೀತಿಯೇ ಅನನ್ಯ. ಅಣ್ಣಾ ಹಜಾರೆಯವರ ಕಾರ್ಯದ ಸಂಗ್ರಹ ಇಲ್ಲಿದೆ.

ರಾಳೇಗಾಂವ್ ಸಿದ್ಧಿ ಎಂದಾಕ್ಷಣ ನೆನಪಾಗುವ ಹೆಸರು ಅಣ್ಣಾ ಹಜಾರೆ ಅವರದು. ಅನೇಕ ಮಹಾನ್ ವ್ಯಕ್ತಿಗಳು ತಮ್ಮ ಸಾಧನೆಯಿಂದ ಹುಟ್ಟೂರಿಗೆ ಕೀರ್ತಿಯನ್ನು ತಂದು, ಅವನ್ನು ಜಗತ್ತಿನ ಅಥವಾ ರಾಷ್ಟ್ರದ ಭೂಪಟದಲ್ಲಿ ಗುರುತಿಸುವಂತಹ ಸ್ಥಳವನ್ನಾಗಿ ಮಾಡಿರುತ್ತಾರೆ. ಆದರೆ ಕಿಶನ್ ರಾವ್ ಬಾಬುರಾವ್ ಹಜಾರೆ ಅವರ ಸಾಧನೆ ವಿಶಿಷ್ಟವಾದದ್ದು. ಅವರು ತಮ್ಮ ಸುತ್ತಲಿನ ಸಮಾಜದ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಸುಧಾರಣೆಯನ್ನು ಸಾಧಿಸಿ ಊರಿನ ಬೆಳವಣಿಗೆಯೊಂದಿಗೆ ತಾವೂ ಬೆಳೆದರು; ವ್ಯಕ್ತಿಯೊಬ್ಬ ತನ್ನೆಲ್ಲಾ ವ್ಯಕ್ತಿಗತ ಆಸೆಗಳನ್ನು ಬದಿಗೊತ್ತಿ, ಧ್ಯೇಯ, ನಿಷ್ಠೆಯಿಂದ ನಿಃಸ್ವಾರ್ಥವಾಗಿ ದುಡಿದರೆ, ಏನೆಲ್ಲಾ ಸಾಧಿಸಬಹುದೆಂಬುದಕ್ಕೆ ಜ್ವಲಂತ ಉದಾಹರಣೆಯಾದರು.





ರಾಳೇಗಾಂವ್ ಸಿದ್ಧಿ ಮಹಾರಾಷ್ಟ್ರದ ಅಹಮದ್‌ನಗರ ಜಿಲ್ಲೆಯ ಪಾರ್‌ನೇರ್ ತಾಲ್ಲೂಕಿನ ಒಂದು ಸಣ್ಣ ಹಳ್ಳಿ. ಈ ಹಳ್ಳಿಯ ಒಂದು ಸಾಮಾನ್ಯ ರೈತ ಕುಟುಂಬದ ಹಿರಿಯ ಮಗನಾಗಿ ಜನಿಸಿದ ಹಜಾರೆ ೧೯೬೨ರ ಭಾರತ–ಚೀನಾ ಯುದ್ಧದ ಸಮಯದಲ್ಲಿ ಮಿಲಿಟರಿ ಡ್ರೈವರ್ ಆಗಿ ಭರ್ತಿಯಾದರು. ಸ್ವಲ್ಪ ಸಮಯದ ನಂತರ ತಂಗಿಯ ಮದುವೆಗೋಸ್ಕರ ಹಣ ಬೇಕೆಂದು ಮನೆಯಿಂದ ಕೋರಿಕೆಯ ಪತ್ರ ಬಂದಾಗ, ಕೈಯಲ್ಲಿ ಹಣವಿಲ್ಲದೆ, ಮನೆಯವರಿಗೆ ಮುಖ ತೋರಿಸಲು ಮನಸ್ಸಿಲ್ಲದೆ, ಅವರ ಮನಸ್ಸಿನಲ್ಲಿ ಆತ್ಮಹತ್ಯೆಯ ವಿಚಾರ ಸುಳಿದಿತ್ತು. ಆದರೆ ವಿಧಿಲಿಖಿತ ಬೇರೆ ಇತ್ತು. ಊರಿಗೆ ವಾಪಸು ಬರುವಾಗ ಮುಂಬಯಿಯ ರೈಲು ನಿಲ್ದಾಣದಲ್ಲಿ ಸ್ವಾಮಿ ವಿವೇಕಾನಂದರ ಬಗ್ಗೆ ಪುಸ್ತಕವೊಂದನ್ನು ಓದಿದ ಹಜಾರೆ, ಮನಸ್ಸು ಬದಲಾಯಿಸಿ ತಮ್ಮ ಜೀವನವನ್ನು ಪರರಿಗಾಗಿ ಮೀಸಲಿಡಲು ನಿಶ್ಚಯಿಸಿದರು. ೧೯೬೫ರ ಭಾರತ–ಪಾಕಿಸ್ತಾನ ಯುದ್ಧದ ಸಂದರ್ಭದಲ್ಲಿ ಹಜಾರೆಯವರ ಬದುಕಿನಲ್ಲಿ ಮತ್ತೊಂದು ಪ್ರಮುಖ ಘಟನೆ ಸಂಭವಿಸಿತು. ಲಾಹೋರ್ ಸೆಕ್ಟರ್‌ನಲ್ಲಿ ಹಜಾರೆಯವರು ಚಲಾಯಿಸುತ್ತಿದ್ದ ಮಿಲಿಟರಿ ಟ್ಯಾಂಕರ್‌ನ ಮೇಲೆ ಪಾಕಿಸ್ತಾನಿ ಜೆಟ್ ವಿಮಾನಗಳಿಂದ ನಡೆದ ದಾಳಿಯಲ್ಲಿ ಅವರೊಂದಿಗಿದ್ದ ನಾಲ್ವರು ಸೈನಿಕರು ಸ್ಥಳದಲ್ಲೇ ಮೃತಪಟ್ಟರು. ಈ ಘಟನೆಯಿಂದ ಹಜಾರೆಯವರು ಬಹು ನೊಂದುಕೊಂಡರಾದರೂ ಭಗವಂತ ತಮ್ಮನ್ನು ಯಾವುದೋ ವಿಶೇಷ ಕಾರಣಕ್ಕಾಗಿ ಉಳಿಸಿದ್ದಾನೆಂದು ಭಾವಿಸಿದರು. ಆಗಲೇ ಅವರು ಜೀವನಪರ್ಯಂತ ಬ್ರಹ್ಮಚಾರಿಯಾಗಿ ಇದ್ದು, ದೇಶಸೇವೆ ಮತ್ತು ಸಮಾಜಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು ತೀರ್ಮಾನಿಸಿದರು.

ಹಜಾರೆಯವರು ೧೯೭೫ರಲ್ಲಿ ಸೇನೆಯಿಂದ ಸ್ವಯಂ ನಿವೃತ್ತಿ ಹೊಂದಿ ರಾಳೇಗಾಂವ್ ಸಿದ್ಧಿಗೆ ಖಾಯಂ ಆಗಿ ನೆಲೆಸಲು ಬಂದರು. ಆ ಸಮಯದಲ್ಲಿ ಬೇಸಿಗೆಯ ನಾಲ್ಕು ತಿಂಗಳ ಕಾಲ ಅವರ ಹಳ್ಳಿಗೆ ಕುಡಿಯುವ ನೀರನ್ನು ಸರ್ಕಾರವು ಟ್ಯಾಂಕರ್‌ನಲ್ಲಿ ಹೊರಗಡೆಯಿಂದ ಕಳುಹಿಸುತ್ತಿತ್ತು. ಕುಡಿಯುವ ನೀರಿಗೆ ತೊಂದರೆಯಿದ್ದರೂ ಸುಮಾರು ೩೫–೪೦ ಕಳ್ಳಭಟ್ಟಿ ಮದ್ಯ ಘಟಕಗಳು ಅಲ್ಲಿ ಯಥೇಚ್ಛ ಸಾರಾಯಿ ತಯಾರಿಸಿ, ಮಾರಾಟ ಮಾಡುತ್ತಿದ್ದವು. ಗ್ರಾಮದ ಜನ ಸೋಮಾರಿಗಳೂ, ವ್ಯಸನಿಗಳೂ ಆಗಿರುವುದನ್ನು ಗಮನಿಸಿ ಹಜಾರೆಯವರು ದುಃಖಿತರಾದರು. ಜನರನ್ನು ನೀತಿಮಾರ್ಗದೆಡೆಗೆ ಸೆಳೆಯದಿದ್ದರೆ ತಾವು ಉದ್ದೇಶಿಸಿದ್ದ ಸಮಾಜಸೇವೆಯನ್ನು ಕೈಗೊಳ್ಳಲು ಸಾಧ್ಯವಿಲ್ಲವೆಂದು ಹಜಾರೆ ಮನಗಂಡರು. ಆ ಊರಿನಲ್ಲಿ ನೂರಾರು ವರ್ಷಗಳ ಹಿಂದೆ ಕಾಲವಾಗಿ ಹೋಗಿದ್ದ ಶ್ರೀ ಯಾದವ ಬಾಬಾ ಕೇರಡೆ ಎಂಬ ಸಂತನ ಸಮಾಧಿಸ್ಥಳದ ಪುನರುಜ್ಜೀವನವನ್ನು ತಮ್ಮ ಸ್ವಂತ ಖರ್ಚಿನಲ್ಲಿ ಕೈಗೆತ್ತಿಕೊಂಡು ೧೫–೨೦ ಜನ ನಾಗರಿಕರನ್ನು ಈ ಕಾರ್ಯದಲ್ಲಿ ತೊಡಗಿಸುವಲ್ಲಿ ಯಶಸ್ವಿಯಾದರು. ಅನಂತರ ಮಹಾರಾಷ್ಟ್ರ

ಸರ್ಕಾರದ ಅನೇಕ ಇಲಾಖೆಗಳಲ್ಲಿ ಗ್ರಾಮೀಣ ಅಭಿವೃದ್ಧಿಗಾಗಿ ಯಾವ ಯಾವ ರೀತಿಯ ಸಹಾಯ ಸೌಲಭ್ಯಗಳಿವೆ ಎಂಬುದನ್ನು ವಿಚಾರಿಸುತ್ತಾ ತಮ್ಮ ಹಳ್ಳಿಗೆ ಕೆಲವು ಸವಲತ್ತುಗಳು ಹರಿದು ಬರಲು ಕಾರಣಕರ್ತರಾದರು. ಅದಕ್ಕಾಗಿ ಮಾಡಬೇಕಿದ್ದ ತಿರುಗಾಟ, ಪತ್ರ ವ್ಯವಹಾರಗಳಿಗೆ ಸ್ವಂತ ಹಣವನ್ನೇ ವಿನಿಯೋಗಿಸಿದರು. ಈ ರೀತಿಯ ಚಟುವಟಿಕೆಗಳಿಂದ ಗ್ರಾಮಸ್ಥರು ತಾವಾಗಿ ಹಜಾರೆಯವರನ್ನು ಅರಸಿಕೊಂಡು ಬಂದು ತಮ್ಮ ದೂರು-ದುಮ್ಮಾನಗಳನ್ನು ನಿವೇದಿಸಿಕೊಂಡು, ಸೂಕ್ತ ಪರಿಹಾರ ಪಡೆದುಕೊಳ್ಳಲಾರಂಭಿಸಿದರು. ಆದರೆ ಹಜಾರೆಯವರ ಸಮಾಜಮುಖಿ ಕೆಲಸಗಳಿಂದ ಅವರ ಕುಟುಂಬಸ್ಥರು ತೀವ್ರವಾಗಿ ಅಸಮಾಧಾನಗೊಂಡರು. ಇದರಿಂದಾಗಿ ಹಜಾರೆಯವರು ಮನೆಯನ್ನು ತೊರೆದು, ತಾವೇ ನಿರ್ಮಿಸಿದ ಮಂದಿರದ ಒಂದು ಕೊಠಡಿಯಲ್ಲಿ ವಾಸಿಸಲು ಪ್ರಾರಂಭಿಸಿದರು. ಇಂದಿಗೂ ಹಜಾರೆಯವರು ಅದೇ ಜಾಗದಲ್ಲಿ ವಾಸಿಸುತ್ತಾ, ಸಮೀಪದಲ್ಲಿ ಇರುವ ವಿದ್ಯಾರ್ಥಿ ನಿಲಯದಲ್ಲಿ ಎಲ್ಲರೊಂದಿಗೆ ಆಹಾರ ಸೇವಿಸುತ್ತಾರೆ.

ಸರ್ಕಾರದಿಂದ ಮಂಜೂರಾದ ಅನುದಾನಗಳನ್ನು ೧೯೭೭ರಲ್ಲಿ ಸ್ಥಾಪಿಸಿದ ಸಂತ ಯಾದವ ಬಾಬಾ ಯುವಕ ಮಂಡಲಿಯ ಮೂಲಕ ಗ್ರಾಮಾಭಿವೃದ್ಧಿಗೆ ಬಳಸತೊಡಗಿದರು. ೧೯೭೭-೭೮ರಲ್ಲಿ ಜಲಾನಯನ ಅಭಿವೃದ್ಧಿ ಕಾಮಗಾರಿಗಳ ಅಡಿಯಲ್ಲಿ ಮಣ್ಣಿನ ಬದು ಹಾಗೂ ಇಂಗುಗುಂಡಿಗಳನ್ನು ಗ್ರಾಮಸ್ಥರ ಶ್ರಮದಾನದಿಂದ ನಿರ್ಮಿಸಲು ಪ್ರಾರಂಭಿಸಿದರು. ೧೯೭೮ರಲ್ಲಿ ಸಂತ ಯಾದವ ಬಾಬಾ ಶಿಕ್ಷಣ ಪ್ರಸಾರಣ ಮಂಡಲಿಯನ್ನು ಸ್ಥಾಪಿಸಿ, ಹಳ್ಳಿಯಲ್ಲಿ ಮೊದಲ ಬಾರಿಗೆ ಮಾಧ್ಯಮಿಕ ಶಾಲೆಯನ್ನು ಪ್ರಾರಂಭಿಸಿದರು. ೧೯೮೫ರಿಂದ ಗ್ರಾಮದಲ್ಲಿ ಸಾಮಾಜಿಕ ಅರಣ್ಯೀಕರಣ ಯೋಜನೆಗಳನ್ನು ಸರ್ಕಾರದ ನೆರವಿನಿಂದ ಕೈಗೆತ್ತಿಕೊಳ್ಳಲಾಯಿತು. ಈ ಎಲ್ಲಾ ಪ್ರಯತ್ನಗಳಿಂದ ಗ್ರಾಮದ ಒಟ್ಟು ೨,೫೦೦ ಎಕರೆ ವಿಸ್ತೀರ್ಣದಲ್ಲಿ ಮೊದಲು ಕೇವಲ ೬೦೦ ಎಕರೆ ಜಾಗ ಕೃಷಿಯೋಗ್ಯವಾಗಿದ್ದರೆ, ಇಂದು ೧,೮೫೦ ಎಕರೆ ಕ್ಷೇತ್ರದಲ್ಲಿ ಕೃಷಿ ಮಾಡಲಾಗುತ್ತಿದೆ. ಒಂದೆ ಕೊಳವೆಬಾವಿಗಾಗಿ ೭೦೦ ಅಡಿ ಕೊರೆದರೆ ನೀರು ಸಿಗುತ್ತಿದ್ದರೆ, ಇಂದು ೪೫-೫೦ ಅಡಿಗೇ ತೆರೆದ ಬಾವಿಯಲ್ಲಿ, ಯಥೇಚ್ಛ ನೀರು ಲಭ್ಯವಾಗುತ್ತಿದೆ. ಹೊಲದ ಬದುಗಳು, ಖಾಸಗಿ ಹಿತ್ತಲುಗಳು, ಶಾಲಾ ಕಾಲೇಜು ವನಗಳು, ತರಬೇತಿ ಕೇಂದ್ರಗಳೆಲ್ಲೆಡೆ ಹಣ್ಣಿನ ಗಿಡಗಳಾದ ಮಾವು, ಪೇರಲ, ಸಪೋಟ, ದಾಳಿಂಬೆ, ನೆಲ್ಲಿ ಇತ್ಯಾದಿಗಳು ಕಂಗೊಳಿಸುತ್ತಿವೆ. ರಾಲೇಗಾಂವ್ ಸಿದ್ಧಿ ವ್ಯಾಪ್ತಿಯ ಹೊರಗಿನ ಭೂಪ್ರದೇಶದ ನೋಟ ಮತ್ತು ಆರ್ಥಿಕ ಸ್ಥಿತಿಗತಿಗೂ ಈ ಹಳ್ಳಿಯ ಚಿತ್ರಣಕ್ಕೂ ಅಜಗಜಾಂತರ ವ್ಯತ್ಯಾಸವಿರುವುದು ನಮ್ಮಂತಹ ಪ್ರವಾಸಿಗರಿಗೂ ಮೇಲ್ನೋಟಕ್ಕೆ ಗೋಚರಿಸುತ್ತದೆ.



ಶ್ರೀ ಅಣ್ಣಾ ಹಜಾರೆ

ಸುಮಾರು ಎರಡು ಸಾವಿರ ಜನಸಂಖ್ಯೆಯ ಈ ಪುಟ್ಟ ಹಳ್ಳಿಯಲ್ಲಿ ಇಂದು ಈ ಕೆಳಕಂಡ ಐದು ಸೂತ್ರಗಳನ್ನು ಕಡ್ಡಾಯವಾಗಿ ಪರಿಪಾಲನೆ ಮಾಡುತ್ತಿದ್ದಾರೆ:

೧. **ನಸ್ಬಬಂದಿ**—ಯಾವುದೇ ಕುಟುಂಬದಲ್ಲೂ ಎರಡಕ್ಕಿಂತ ಹೆಚ್ಚು ಮಕ್ಕಳನ್ನು ಹೆರುವುದಿಲ್ಲ. ಮೂರನೇ ಮಗುವಿಗೆ ಗ್ರಾಮಸಭಾದಿಂದ ಯಾವುದೇ ಉಚಿತ ಸೌಲಭ್ಯವಿರುವುದಿಲ್ಲ.

೨. **ನಶಾಬಂದಿ**—ಮದ್ಯ, ತಂಬಾಕು, ಸಿಗರೇಟ್ ಇತ್ಯಾದಿಗಳ ಮಾರಾಟ ಮತ್ತು ಸೇವನೆ ನಿಷೇಧ; ಉಲ್ಲಂಘಿಸಿದವರಿಗೆ ಮಂದಿರದೆದುರು ವಿದ್ಯುತ್ ಕಂಬಕ್ಕೆ ಕಟ್ಟಿ ಛಡಿ ಏಟು ಶಿಕ್ಷೆ ವಿಧಿಸಲಾಗುತ್ತದೆ.

೩. **ಕುರಾಡ್‌ಬಂದಿ**—ಸಾರ್ವತ್ರಿಕ ಸ್ವತ್ತಿನಲ್ಲಿರುವ ಮರಗಿಡಗಳನ್ನು ಕಡಿಯಲು ನಿಷೇಧ. ಸ್ವಂತ ಜಾಗದಲ್ಲಿ ಎರಡು ಹೊಸ ಗಿಡ ನೆಟ್ಟು, ಗ್ರಾಮಸಭೆಯಿಂದ ಮಂಜೂರಾತಿ ಪಡೆದು, ಅನಂತರವೇ ಒಂದು ಮರವನ್ನು ಕಡಿಯಬಹುದು.

೪. **ಚರಾಯ್‌ಬಂದಿ**—ಜಾನುವಾರುಗಳಿಗೆ ೩೫ ಎಕರೆಯ ಸಾಮಾನ್ಯ ಹುಲ್ಲುಗಾವಲನ್ನು ಬಿಟ್ಟು ಬೇರೆಲ್ಲೂ ತಿರುಗಾಡಲೂ ಅವಕಾಶವಿಲ್ಲ. ತಪ್ಪಿದರೆ ಮೊದಲ ಅಪರಾಧಕ್ಕೆ ಐದುನೂರು ರೂಪಾಯಿ ದಂಡ.

೫. **ಶ್ರಮದಾನ**—ವಾರಕ್ಕೊಂದು ದಿನ ಗ್ರಾಮದ ಸಾರ್ವತ್ರಿಕ ಕೆಲಸಕ್ಕೆ ಪ್ರತಿ ಕುಟುಂಬದಿಂದ ಒಬ್ಬ ವ್ಯಕ್ತಿಯು ಕಡ್ಡಾಯವಾಗಿ ಶ್ರಮದಾನ ಕೆಲಸದಲ್ಲಿ ಪಾಲ್ಗೊಳ್ಳಲೇಬೇಕು.

ಗ್ರಾಮದ ಎಲ್ಲಾ ಮನೆಗಳೂ ಶೌಚಾಲಯ ಹೊಂದಿದ್ದು,

ಉಳಿದ ಮಹಾರಾಷ್ಟ್ರದ ಹಳ್ಳಿಗಳಂತೆ ತಂಬಿಗೆಯಲ್ಲಿ ನೀರು ತೆಗೆದುಕೊಂಡು ಬಹಿರ್ದೆಶೆಗೆ ಹೋಗಬೇಕಾಗಿಲ್ಲ. ಬಹಳ ಹಿಂದೆ ತೆಗೆಸಿದ್ದ ೧೭ ಕೊಳವೆಬಾವಿಗಳ ಹೊರತು ಹೊಸ ಕೊಳವೆ ಬಾವಿ ತೆಗೆಸಲು ಅನುಮತಿ ಇಲ್ಲ. ಇಷ್ಟು ಶಿಸ್ತುಬದ್ಧ ಕಾನೂನನ್ನು ಸರ್ಕಾರೇತರ ಸಂಸ್ಥೆಯೊಂದು ಅನುಸರಿಸಿ ಆಚರಣೆಯಲ್ಲಿ ತರುತ್ತಿದೆಯೆಂದರೆ, ಆ ಊರಿನ ನಾಗರಿಕರ ಮನಃಪರಿವರ್ತನೆ ಯಾವ ಪ್ರಮಾಣದಲ್ಲಿ ಆಗಿದೆಯೆಂಬುವನ್ನು ಊಹಿಸುವುದು ಕಷ್ಟಸಾಧ್ಯ. ಕೇವಲ ಭಾಷಣಗಳಿಂದ ಮಾತ್ರ ಪ್ರಗತಿ ಸಾಧ್ಯವಿಲ್ಲವೆಂಬುದನ್ನು ಮನಗಂಡೇ ಸ್ವಯಂ ಪರಿಪಾಲಿಸುವುದರ ಮೂಲಕ ತಮ್ಮ ಆದರ್ಶಗಳನ್ನು ಸಾಕಾರಗೊಳಿಸಿದ ಯುಗಪುರುಷ ಅಣ್ಣಾ ಹಜಾರೆ. ಅವರು ಕೇವಲ ಇಷ್ಟಕ್ಕೆ ತೃಪ್ತರಾಗದೇ ೧೯೯೫ರಲ್ಲಿ ಹಿಂದ್ ಸ್ವರಾಜ್ ಟ್ರಸ್ಟನ್ನು ಪೂನಾದಲ್ಲಿ ಸ್ಥಾಪಿಸಿ ಮಹಾರಾಷ್ಟ್ರದಾದ್ಯಂತ ೮೫ ಹಳ್ಳಿಗಳಲ್ಲಿ ಈ ಮಾದರಿಯನ್ನು ಜಾರಿಗೆ ತರಲು ಪ್ರಯತ್ನಿಸುತ್ತಿದ್ದಾರೆ. ಪ್ರತಿ ಹಳ್ಳಿಯಲ್ಲೂ ಈ ಕಾರ್ಯಕ್ರಮದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡ ಒಬ್ಬರು ಕಾರ್ಯಕರ್ತರಿಗೆ ಮಾಸಿಕ ೧,೫೦೦ ರೂಪಾಯಿಗಳ ಗೌರವಧನವನ್ನು ಟ್ರಸ್ಟ್‌ನಿಂದ ನೀಡಲಾಗುತ್ತಿದೆ. ಹಜಾರೆಯವರಿಗೆ ಸಂದಿರುವ ಅನೇಕ ಪ್ರಶಸ್ತಿಗಳ ಒಟ್ಟು ಧನರೂಪದ ಮೌಲ್ಯ ಸುಮಾರು ಹದಿನೆಂಟು ಲಕ್ಷ ರೂಪಾಯಿಗಳನ್ನು ಈ ಟ್ರಸ್ಟಿನ ಮೂಲ ನಿಧಿಯಾಗಿಟ್ಟಿದ್ದು, ಅದರ ಬಡ್ಡಿಯನ್ನು ಮೇಲ್ಕಂಡ ಚಟುವಟಿಕೆಗಳಿಗಾಗಿ ಬಳಸಿಕೊಳ್ಳಲಾಗುತ್ತಿದೆ.

ರಾಲೇಗಾಂವ್ ಸಿದ್ಧಿ ಪರಿವಾರದ ವತಿಯಿಂದ ಪ್ರತಿ ತಿಂಗಳು ನಿಯಮಿತವಾಗಿ ಗ್ರಾಮಸಭೆಗಳು ನಡೆಯುತ್ತವೆ. ಪ್ರತಿವರ್ಷವೂ ಹೊಸ ಕಾರ್ಯಕಾರಿ ಮಂಡಳಿಗಳು ಅಸ್ತಿತ್ವಕ್ಕೆ ಬರುತ್ತಿವೆ. ಈ ಎಲ್ಲಾ ಕೆಲಸಗಳು ಸ್ವಯಂಚಾಲಿತ ಯಂತ್ರದಂತೆ ನಡೆಯುತ್ತಿದ್ದು, ಹಜಾರೆಯವರು ಕೇವಲ ಮಾರ್ಗದರ್ಶಕರಾಗಿರುತ್ತಾರೆ.

ರಾಲೇಗಾಂವ್‌ನ ಆರ್ಥಿಕ ಪ್ರಗತಿಗೆ ಕೇವಲ ಎರಡು ಉದಾಹರಣೆ ನೀಡಿದರೆ ಸಾಕು. ಪ್ರತಿದಿನ ಈ ಹಳ್ಳಿಯಿಂದ ಸುಮಾರು ೩,೦೦೦ ಲೀಟರ್ ಹಾಲು ಸಹಕಾರಿ ಸಂಘಕ್ಕೆ ಸರಬರಾಜಾಗುತ್ತಿದೆ! ಪ್ರತಿವರ್ಷ ಸುಮಾರು ೭೦ ಲಕ್ಷ ರೂ. ಮೌಲ್ಯದಷ್ಟು ಆದಾಯ ಈರುಳ್ಳಿ ಬೆಳೆಯೊಂದರಿಂದಲೇ ಬರುತ್ತಿದೆ.

ನಾವು ಕಂಡು ಅನುಭವಿಸಿದ ರಾಲೇಗಾಂವ್ ಸಿದ್ಧಿ ಒಂದು ಸುಂದರ ಸ್ವಪ್ನದಂತೆ ಆಗಾಗ್ಗೆ ಭಾಸವಾಗುತ್ತದೆ. ತರಬೇತಿ ಕೇಂದ್ರದ ಶಿಸ್ತಿನ ಚಟುವಟಿಕೆಗಳು ರಾಲೇಗಾಂವ್ ಸಿದ್ಧಿಯ ಪರಿವರ್ತನೆಗೆ ಹಿಡಿದ ಕೈಗನ್ನಡಿಯಂತೆ ಭಾಸವಾಗುತ್ತವೆ. ಪೂನಾ–ಅಹಮದ್‌ನಗರ ರಸ್ತೆಯಲ್ಲಿ, ಶಿರ್ಡಿಗೆ ಹೋಗುವ ದಾರಿಯಲ್ಲಿ ನೀವು ಸಂಚರಿಸುತ್ತಿದ್ದರೆ ನೋಡಲೇಬೇಕಾದ ಒಂದು ಕರ್ಮಯೋಗದ ತೀರ್ಥಕ್ಷೇತ್ರವಿದು.

ಸಂಗ್ರಹ : ಶಿವನಕೆರೆ ಬಸವಲಿಂಗಪ್ಪ,
ದಾವಣಗೆರೆ (*ಸಿರಿ ಸಮೃದ್ಧಿ* ಪತ್ರಿಕೆಯಿಂದ)

**ಈ ಸ್ಥಳಕ್ಕೆ ಭೇಟಿ ನೀಡುವ ಕನ್ನಡ ಭಾಷೆಯನ್ನು ಮಾತ್ರ ಬಲ್ಲವರು ಶ್ರೀ ಬಸವರಾಜ ಪಾಟೀಲ್ ಎಂಬುವವರನ್ನು ಈ ವಿಳಾಸದಲ್ಲಿ ಸಂಪರ್ಕಿಸಬಹುದು:**

**ತರಬೇತಿ ಕೇಂದ್ರ, ರಾಲೇಗಾಂವ್ ಸಿದ್ಧಿ, ಪರನೇರ್ ತಾಲ್ಲೂಕು, ಅಹಮದ್‌ನಗರ ಜಿಲ್ಲೆ, ಮಹಾರಾಷ್ಟ್ರ ರಾಜ್ಯ.**

**ದೂರವಾಣಿ ಸಂಖ್ಯೆ:**
**02488–240223/240227, 240404 / 240405**

ಕಾವ್ಯ ಪ್ರಭ

## ಅಮೃತಪುತ್ರ ಶ್ರೀ ಸ್ವಾಮಿ ವಿವೇಕಾನಂದ

ಭಾರತ ಜನನಿಯ ಅಮೃತಪುತ್ರ
ನೀವೇ ಈ ದೇಶದ ಉಜ್ವಲ ನೇತ್ರ !

ನಿಮ್ಮ ಅಂತರಂಗದ ಒಡಲು,
ತುಂಬಿದ ಒಲವು ಕರುಣೆಯ ಕಡಲು.
ವೇದ, ವೇದಾಂತವೇ ಬಾಯಲ್ಲಿ ಪುಟಿಪುಟಿಸಿ,
ದೇಶಕೆ ತಂದಿರಿ ಕೀರ್ತಿಯ ನಲಿನಲಿಸಿ!

ನಿಮ್ಮ ಗುರು ಪರಮಹಂಸರು,
ಈ ಲೋಕವೇ ಮೆಚ್ಚಿದ ಜಗದ್ಗುರು.
ಗುರುಚರಣವ ನಂಬಿ ಲೋಕಕೆ ಬಿಂಬಿತರಾಗಿ,
ನಡೆದಿರಿ, ದುಡಿದಿರಿ ಈ ದೇಶದ ಹಿತಕಾಗಿ!

ದೇಶ ದೇಶಕೆ ಪರ್ಯಟನೆ,
ಅಲ್ಲಿಯೂ ಭಾರತವೇ ನಿಮ್ಮ ಮನೆ.
ಅನುದಿನದೆಡೆಯಲ್ಲೂ ಭಾರತದ ಚಿಂತೆ,
ಮಾತಿನ ಜಾಡಿನಲಿ ಸದಾ ಗಗನ ಗಂಭೀರತೆ!

ನಿಮ್ಮ ಕನಸಿನ ಈ ಸುಂದರ ಭಾರತ,
ನೀಡಲಿ ಎಂದಿಗೂ ನಮಗೆ ಹಿತ.
"ಎಚ್ಚರ! ಎಚ್ಚರ! ಬಾಳಲಿ ಎಚ್ಚರ,
ಎಂಬ ಈ ನಿಮ್ಮ ನುಡಿ ಮೂಡಿಸಲಿ ಮುನ್ನಡೆಗಾತುರ!"

ನಿಮ್ಮ 'ಸಿಂಹವಾಣಿ' ಅನುದಿನವೂ ಅನುರಣನಗೊಳಲಿ,
ಈ ಸ್ಫೂರ್ತಿವಾಣಿಯೇ ನಮಗೆ ನವಚೇತನವಾಗಲಿ
ನಿಮ್ಮ ಆದರ್ಶದ ಜೀವನ,
ಅನುಸರಿಸಲಿ ಎಂದಿಗೂ ಈ ಲೋಕದ ಜನ!

—ಶಂಕರೇಗೌಡ ತುಂಬಕೆರೆ, ಮಂಡ್ಯ